ಅನುದಾನವನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು, ಇದನ್ನು ಹೆಚ್ಚಿಸಲು ಸಾಧ್ಯವಾಗುವುದಿಲ್ಲ. ಸಂಸ್ಥೆಯನ್ನು ಶಾಶ್ವತ ಅನುದಾನ ಸಂಹಿತೆಗೆ ಒಳಪಡಿಸಲು ಸಹ ಸಾಧ್ಯವಾಗುವುದಿಲ್ಲ.

ಆ) ಕೆಳದಿಯ ಕೇಂದ್ರದ ಸಿಬ್ಬಂದಿ ವರ್ಗಕ್ಕೆ ಪ್ರಸಕ್ತ ಸಾಲಿನಲ್ಲಿ ಒದಗಿಸಲಾಗಿರುವ 4.50 ಲಕ್ಷ ರೂ.ಗಳಲ್ಲಿ, ದಿನಾಂಕ 4.6.999 ರಂದು 2.25 ಲಕ್ಷ ರೂ.ಗಳ ಅನುದಾನವನ್ನು ಬಿಡುಗಡೆ ಆದೇಶವನ್ನು ಹೊರಡಿಸಿದೆ.

ಇ) -ಮೇಲಿನಂತೆ-

ಜಿಲ್ಲಾ ರಂಗ ಮಂದಿರಗಳು.

1597(2273). ಶ್ರೀ ಕುಂಭೆ ಸುಂದರ್‌ರಾವ್ (ಸುರತ್ಕಲ್) :— ಮಾನ್ಯ ಕನ್ನಡ ಮತ್ತು ಸಂಸ್ಕೃತಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲೆಗೊಂದು ರಂಗಮಂದಿರ ಎಂಬ ಸರ್ಕಾರದ ಯೋಜನೆಯನ್ನು ಇನ್ನು ಜಾರಿಯಲ್ಲಿ ಇದೆಯೇ? ಹಾಗಿದ್ದಲ್ಲಿ, ಎಷ್ಟು ಜಿಲ್ಲೆಗಳಲ್ಲಿ ರಂಗಮಂದಿರ ನಿರ್ಮಾಣವಾಗಿದೆ.

ಆ) ಮಂಗಳೂರಿನಲ್ಲಿ ರಂಗಮಂದಿರ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಇ) ಇದಕ್ಕೆ ಬೇಕಾದ ನಿಧಿ ಸಂಗ್ರಹ ಆಗಿದೆಯೇ? ಹಾಗಿದ್ದರೆ ನಿರ್ಮಾಣದ ಕಾರ್ಯ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು?

ಈ) ಶೀಘ್ರದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವೆಯರು) :—

ಅ) 1) ಇದೆ.

2) ತುಮಕೂರು, ಕೋಲಾರ, ಶಿವಮೊಗ್ಗ, ಬಳ್ಳಾರಿ, ರಾಯಚೂರು, ಕಾರವಾರ, ಹಾಸನ ಹಾಗೂ ಬೆಳಗಾವಿ.

ಆ) ಈ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

ಇ) 1) ಸಾರ್ವಜನಿಕರಿಂದ 44.00 ಲಕ್ಷ ರೂ. ನಿಧಿ ಸಂಗ್ರಹವಾಗಿದೆ.

2) ನಿವೇಶನದ ತೊಂದರೆಯಿಂದಾಗಿ ಹಾಗೂ ಪರಿಷ್ಕೃತ ಅಂದಾಜಿನಂತೆ ರೂ.2.00 ಕೋಟಿ ಹೊಂದಿಸಬೇಕಾದ ಅನಿವಾರ್ಯತೆಯಿಂದಾಗಿ ವಿಳಂಬವಾಯಿತು.

ಈ) ಹೌದು

ಸುರತ್ಕಲ್ ಕ್ಷೇತ್ರದಲ್ಲಿ ರಸ್ತೆಗಳ ದುರಸ್ತಿ ಕಾರ್ಯ.

1599(2380) ಶ್ರೀ ಕುಂಬ್ಳೆ ಸುಂದರ್ ರಾವ್ (ಸುರತ್ಕಲ್) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಕ್ಷೇತ್ರದಲ್ಲಿ ನಾದುರಸ್ತಿಯಲ್ಲಿರುವ ರಸ್ತೆಗಳು ಯಾವುವು; ಅವುಗಳ ದುರಸ್ತಿಗೆ ಸರ್ಕಾರದವರು ಮೀಸಲಿರಿಸಿದ ಹಣವೆಷ್ಟು (ಹೆಸರು, ಮೊತ್ತ ವಿವರಿಸುವುದು)

(ಆ) ಕೂಳೂರು ಕಾವೂರು ರಸ್ತೆಯನ್ನು ಬೃಹತ್ ಉದ್ದಿಮೆದಾರರ ಸಹಯೋಗದಿಂದ ದುರಸ್ತಿಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

(ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) :—

ಅ) ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖಾ ಆಧೀನದಲ್ಲಿ ಒಟ್ಟು 10 ಜಿಲ್ಲಾ ಮುಖ್ಯ ರಸ್ತೆಗಳಿದ್ದು ಇದರಲ್ಲಿ ಒಂದು ರಾಜ್ಯ ಹೆದ್ದಾರಿ ಎರಡು ಜಿಲ್ಲಾ ಮುಖ್ಯ ರಸ್ತೆಗಳಾದ ಬಜ್ಪೆ ರಸ್ತೆ 12.80 ಕಿಮೀ. ಮತ್ತು ಕೂಳೂರು-ಕಾವೂರು ರಸ್ತೆ 3.40 ಕಿಮೀ. ಇವೆರಡೂ ರಸ್ತೆಗಳು ದುರಸ್ತಿ ಅವಶ್ಯಕವಾಗಿರುತ್ತದೆ. ದುರಸ್ತಿಗೆ ಮೀಸಲಿಟ್ಟ ಹಣ 9.345 ಲಕ್ಷ ರೂ.ಗಳು.

ಆ) ಇದೆ

ಇ) ಕೂಳೂರು-ಕಾವೂರು ರಸ್ತೆಯ ದುರಸ್ತಿಯನ್ನು ಬೃಹತ್ ಉದ್ದಿಮೆದಾರರಿಂದ ಕೈಗೊಳ್ಳುವ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ.

ಧಾರವಾಡ ಮಿಲ್ಕ್ ಫೆಡ್ರೇಷನ್

1600(2265) ಡಾ: ಎಂ.ಪಿ ಕರ್ಕಿ (ಕುಮಟಾ) :— ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.